# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2056 |
| ಮಾನ್ಯ ಸದಸ್ಯರ ಹೆಸರು | ಡಾ.ಎಂ.ಜಿ.ಮುಳೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 25-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿನ ಭೂ ದಾಖಲೆಗಳ ಡಿಜಿಟಲೀಕರಣಕ್ಕಾಗಿ ಜಾರಿಗೆ ತರಲಾಗಿರುವ Bhoomi (e-Bhumi) ಯೋಜನೆಯಡಿ ಎಲ್ಲಾ ಭೂ ದಾಖಲೆಗಳ ಡಿಜಿಟಲೀಕರಣ ಮತ್ತು ನವೀಕರಣ ಪ್ರಕ್ರಿಯೆ ಸಂಪೂರ್ಣಗೊಂಡಿದೆಯೇ; ಬಾಕಿ ಇದ್ದಲ್ಲಿ ಯಾವ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು:<br>(ತಾಲ್ಲೂಕುವಾರು ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಹುಮನಾಬಾದ್, ಔರಾದ್, ಹುಲಸೂರು ಮತ್ತು ಕಮಲನಗರ ತಾಲ್ಲೂಕು ಕಚೇರಿಗಳ ಭೂದಾಖಲೆಗಳ ಗಣಕೀಕರಣ ಮುಕ್ತಾಯವಾಗಿರುತ್ತದೆ.<br><br>ಬಸವಕಲ್ಯಾಣ, ಬಾಲ್ಕಿ, ಬೀದರ್, ಚಿಟಗುಪ್ಪ ತಾಲ್ಲೂಕುಗಳ ಭೂದಾಖಲೆಗಳ ಗಣಕೀಕರಣ ಬಾಕಿ ಇದ್ದು, ಜೂನ್-2026 ರೊಳಗೆ ಗಣಕೀಕರಣ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿರುತ್ತದೆ. |
| ಆ) | ಜಿಲ್ಲೆಯಲ್ಲಿನ ಭೂಮಾಲೀಕತ್ವ ವಿಭಜನೆಗೆ ಸಂಬಂಧಿಸಿದ ಪೋಡಾ/ಪೋಡಿ (Phodi/Partition) ಪ್ರಕರಣಗಳಲ್ಲಿ ವಿಲೇವಾರಿಯಾಗದೆ ಬಾಕಿ ಇರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎರಡು ವರ್ಷಗಳಿಗಿಂತ ಹಳೆಯದಾದ ಅರ್ಜಿಗಳ ಸಂಖ್ಯೆ ಎಷ್ಟು;<br>(ತಾಲ್ಲೂಕುವಾರು ಮಾಹಿತಿ ನೀಡುವುದು) | ಪ್ರಸ್ತುತ ಬೀದರ್ ಜಿಲ್ಲೆಯಲ್ಲಿ ಮೋಜಿಣಿ ತಂತ್ರಾಂಶದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ ತತ್ಕಾಲ್ ಪೋಡಿ, ಬಗರ್ ಹುಕುಂ ಪೋಡಿ ಸೇರಿದಂತೆ ವಿವಿಧ ತರಹೆಯ ಒಟ್ಟು 8,201 ಪೋಡಿ ಅರ್ಜಿಗಳು ಬಾಕಿ ಇರುತ್ತವೆ. ಈ ಪೈಕಿ 4,745 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು 3,456 ಅರ್ಜಿ ಗಳು ಅಳತೆ ಮತ್ತು ವಿವಿಧ ಹಂತದಲ್ಲಿ ಭೂಮಾಪನ ಶಾಖೆಯಲ್ಲಿ ಬಾಕಿಯಿರುತ್ತವೆ.<br><br>ಬೀದರ್ ಜಿಲ್ಲೆಯಲ್ಲಿ ಬಾಕಿ ಇರುವ ಒಟ್ಟು 8,201 ಪೋಡಿ ಅರ್ಜಿಗಳ ಪೈಕಿ 1,649 ಅರ್ಜಿಗಳು ಎರಡು ವರ್ಷ ಕ್ಕಿಂತ ಹೆಚ್ಚು ಕಾಲದಿಂದ ಬಾಕಿಯಿರುವ ಅರ್ಜಿಗ ಳಾಗಿರುತ್ತವೆ.<br><br>ಬಾಕಿಯಿರುವ ಅರ್ಜಿಗಳ ತಾಲ್ಲೂಕುವಾರು ವಿವರವನ್ನು **ಅನುಬಂಧ** ದಲ್ಲಿ ಲಗತ್ತಿಸಿದೆ. |
| ಇ) | ರೈತರು ಕಚೇರಿಗಳಿಗೆ ಅಲೆಯದ ಆನ್‌ಲೈನ್ ಮೂಲಕವೇ ಕಂದಾಯ ದಾಖಲೆಗಳನ್ನು ಪಡೆಯಲು > ಅನುಕೂಲವಾಗುವ ವ್ಯವಸ್ಥೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ಕೇಂದ್ರಗಳು ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಂಪೂರ್ಣವಾಗಿ ಕಾರ್ಯ | ಡಿಜಿಟಲ್ ದಾಖಲೆಗಳನ್ನು ತಾಲ್ಲೂಕು ಕಚೇರಿಗಳಲ್ಲಿ ಆನ್-ಲೈನ್ ಮೂಲಕ ವಿತರಿಸಲಾಗುತ್ತಿದೆ ಮತ್ತು ಆಯ್ದ 100 ನಾಡ - ಕಚೇರಿಗಳಲ್ಲಿ ಪೈಲಟ್ ಆಗಿ ಆನ್-ಲೈನ್ ಮೂಲಕ ಕಂದಾಯ ದಾಖಲೆಗಳನ್ನು ವಿತರಿಸಲಾಗುತ್ತಿದೆ. ಸಾರ್ವಜನಿಕರು ಆನ್- |

| | | |
|---|---|---|
| | ನಿರ್ವಹಿಸುತ್ತಿದೆಯೇ; ಇದರ ಬಳಕೆ ಪ್ರಮಾಣ ಎಷ್ಟು; | ಲೈನ್ ಮೂಲಕ ಸ್ವತಃ ತಾವೇ ಕಂದಾಯ ದಾಖಲೆಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿದೆ. ಇದುವರೆಗೂ ನಾಡ ಕಚೇರಿಗಳಲ್ಲಿ 27,294 ಮತ್ತು ಸಾರ್ವಜನಿಕರು ಆನ್-ಲೈನ್ ಮೂಲಕ 17,89,685 ಪುಟಗಳ ಡಿಜಿಟಲ್ ದೃಢೀಕೃತ ಕಂದಾಯ ದಾಖಲೆಗಳನ್ನು ಪಡೆದಿರುತ್ತಾರೆ. |
| ಈ) | ಸದರಿ ಜಿಲ್ಲೆಯಲ್ಲಿ 'ಕಂದಾಯ ಅದಾಲತ್' (Revenue Adalat) ಅಥವಾ ವಿಶೇಷ ಶಿಬಿರಗಳನ್ನು ಆಯೋಜಿಸಲಾಗಿದೆಯೇ; ಕಳೆದ ಒಂದು ವರ್ಷದಲ್ಲಿ ಈ ಮೂಲಕ ಎಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ; | ಕಂದಾಯ ಅದಾಲತ್ ಯೋಜನೆಯ ಮೂಲಕ ಪಹಣಿ ತಿದ್ದುಪಡಿ ಅಧಿಕಾರವನ್ನು ಉಪ ವಿಭಾಗಾಧಿಕಾರಿಯಿಂದ ತಹಶೀಲ್ದಾರರಿಗೆ ಪ್ರತ್ಯಾಯೋಜಿಸಲಾಗಿದ್ದು, ಸದರಿ ಯೋಜನೆಯ ಅವಧಿಯನ್ನು ಸರ್ಕಾರಿ ಆದೇಶ ಸಂಖ್ಯೆ:ಕಂಇ 45 ಎಂಆರ್ಆರ್ 2025, ದಿನಾಂಕ:23.03.2026ರಲ್ಲಿ ದಿನಾಂಕ: 20.03.2026 ರಿಂದ 31.12.2026 ರವರೆಗೆ ವಿಸ್ತರಿಸಲಾಗಿರುತ್ತದೆ. |
| ಉ) | ಜಿಲ್ಲೆಯ ತಾಲ್ಲೂಕು ಕಚೇರಿಗಳು ಮತ್ತು ಉಪ-ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಹಲವು ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕ ಕೆಲಸಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ 2019-20ನೇ ಸಾಲಿನಲ್ಲಿ ಒಟ್ಟು 56 ಪ್ರ.ದ.ಸ ಹಾಗೂ 25 ದ್ವಿ.ದ.ಸ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿರುತ್ತದೆ ಹಾಗೂ 2025-26 ನೇ ಸಾಲಿನಲ್ಲಿ 1000 ಗ್ರಾಮ ಆಡಳಿತ ಅಧಿಕಾರಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿರುತ್ತದೆ.<br><br>ರಾಜ್ಯದಲ್ಲಿ ಬಾಕಿ ಇರುವ ಅರ್ಜಿಗಳ ಶೀಘ್ರ ವಿಲೇವಾರಿ ಮಾಡುವ ಕುರಿತು ಇಲಾಖೆಗೆ ಹೆಚ್ಚಿನ 1,000 ಜನರಿಗೆ ಭೂಮಾಪನ ಪರವಾನಯನ್ನು ನೀಡುವ ಬಗ್ಗೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ ಮತ್ತು 750 ಜನ ಸರ್ಕಾರಿ ಭೂಮಾಪಕರನ್ನು ನೇಮಕಾತಿ ಮಾಡಿ ಕೊಳ್ಳುವ ಪ್ರಕ್ರಿಯೆಯು ಸಹ ಚಾಲ್ತಿಯಲ್ಲಿರುತ್ತದೆ. |

ಕಂಇ 127 ಎಂಆರ್ಆರ್ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

| ಅನುಬಂದ-01 | | | | | | | | LCQ – 1804(2056) |
|---|---|---|---|---|---|---|---|---|
| ಬಿದರ್ ಜಿಲ್ಲೆಯಲ್ಲಿ ಬಾಕಿಯಿರುವ ಅರ್ಜಿಗಳ ತಾಲ್ಲೂಕುವಾರು ವಿವರ | | | | | | | | |
| ತಾಲ್ಲೂಕು | ಪ್ರಾ. ಶೀಲ್ಕು | ಸ್ವೀಕೃತಿ | ಒಟ್ಟು | ವಿಲೆ | ಬಾಕಿ | ಕಂದಾಯ ಶಾಖೆ ಯಲ್ಲಿ ಬಾಕಿ | ಭೂಮಾಪನ ಶಾಖೆಯಲ್ಲಿ ಬಾಕಿ | ಎರಡು ವರ್ಷಗಳಿಗಿಂತ ಹಳೆಯದಾದ ಅರ್ಜಿಗಳ ಸಂಖ್ಯೆ |
| ಬಸವಕಲ್ಯಾಣ | 918 | 5879 | 6797 | 5694 | 1103 | 212 | 891 | 115 |
| ಭಾಲ್ಕಿ | 692 | 4830 | 5522 | 4020 | 1502 | 881 | 621 | 284 |
| ಔರಾದ್ | 1255 | 5185 | 6440 | 5345 | 1095 | 724 | 371 | 205 |
| ಬೀದರ್ | 655 | 5890 | 6545 | 4708 | 1837 | 1129 | 708 | 515 |
| ಹುಮ್ನಾಬಾದ್ | 228 | 4223 | 4451 | 3759 | 692 | 466 | 226 | 134 |
| ಚಿಟಗುಪ್ಪ | 365 | 4285 | 4650 | 3945 | 705 | 449 | 256 | 171 |
| ಕಮಲನಗರ | 391 | 3316 | 3707 | 2644 | 1063 | 816 | 247 | 200 |
| ಹುಲಸೂರ | 664 | 3418 | 4082 | 3878 | 204 | 68 | 136 | 25 |
| **ಒಟ್ಟು** | **5168** | **37026** | **42194** | **33993** | **8201** | **4745** | **3456** | **1649** |